ಹರಿಯುವ ಮೊದಲೇ ಅಂದುಕೊಂಡ ಜಾಗ ತಲುಪಬೇಕಿತ್ತು. ಇಲ್ಲವೆಂದರೆ ದಿನವೆಲ್ಲಾ ವ್ಯರ್ಥವಾಗುತ್ತಿತ್ತು. ಶೂಟ್ ಮುಗಿಸಿ ರೂಮಿಗೆ ಬರುವ ಹೊತ್ತಿಗೆ ರಾತ್ರಿ ಹನ್ನೆರಡಾಗುತ್ತಿತ್ತು. ಬಂದು ಬ್ಯಾಟರಿಗಳನ್ನು ಚಾರ್ಜ್‌ಗೆ ಹಾಕಿ ಮತ್ತೆ, ಎರಡು ಮೂರು ಗಂಟೆಗಳಲ್ಲೇ ಎದ್ದು ಹೊರಟುಬಿಡುತ್ತಿದ್ದೆವು. ಇವೆಲ್ಲದರ ಹೊರತಾಗಿ ಈ ಅನುಭವ ತುಂಬಾ ಮಜವಾಗಿತ್ತು. ಗೆಳೆಯರ ಜೊತೆ ಟ್ರಿಪ್ ಹೋದಂತೆ ಅನಿಸಿತು.

◆ **ಕಾಡನ್ನು ಚಿತ್ರೀಕರಿಸಲು ಏನೆಲ್ಲಾ ಸಿದ್ಧತೆ ಮಾಡಿಕೊಂಡಿದ್ದಿರಿ?**

ಪ್ರತಿ ಕಾಡಿಗೂ ಅದರೇ ಆದ 'ಕ್ಯಾರೆಕ್ಟರ್' ಇರುತ್ತದೆ. ವನಸಂಪತ್ತಿನ ಕುರಿತು ತಿಳಿದುಕೊಳ್ಳಲು ಹೋದವರಿಗೆ ಆ ಸೂಕ್ಷ್ಮತೆ ಇರಬೇಕು. ಮುಖ್ಯವಾಗಿ ಅಲ್ಲಿನ ಪ್ರಾಣಿಗಳ ನಡವಳಿಕೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಒಂದು ಕಡೆಗೆ ಹೋಗುವ ಮುನ್ನ ಅಲ್ಲಿ ಯಾವ ರೀತಿ ಇರಬೇಕು, ಹೇಗೆ ಶೂಟ್ ಮಾಡಬೇಕು ಎಂಬುದನ್ನು ತಯಾರಿ ಮಾಡಿಕೊಳ್ಳುತ್ತಿದ್ದೆವು. ಕಾಡಿನಲ್ಲಿ ನಾವಂದುಕೊಂಡ ಹಾಗೆ ಎಲ್ಲವೂ ಇರುವುದಿಲ್ಲ. ಏನೇ ಇದ್ದರೂ ಒಂದೇ ಸಲ ಅವಕಾಶ. ಆ ಒಂದು ಶಾಟ್‌ಗೆ ಬೆಳಿಗ್ಗೆಯಿಂದ ಸಂಜೆವರೆಗೂ ಕಾಯುತ್ತಾ ಕುಳಿತಿರಬೇಕಾಗುತ್ತದೆ. ಕೆಲವೊಮ್ಮೆ ಅಚಾನಕ್ಕಾಗಿ ಕೆಲವು ದೃಶ್ಯಗಳು ಸಿಕ್ಕಿಬಿಡುತ್ತವೆ. ಪ್ರಾಣಿ ಪ್ರಪಂಚ ತೆರೆದುಕೊಳ್ಳುತ್ತಿದ್ದಂತೆ ಆಸಕ್ತಿ ಮೂಡುತ್ತದೆ. ಅಂಥ ದೃಶ್ಯಗಳನ್ನು ನೋಡಿಕೊಂಡು ಈ ಡಾಕ್ಯುಮೆಂಟರಿ ದೃಶ್ಯಗಳನ್ನು ಕಟ್ಟಿದೆವು.

ಕೆಲವು ಪ್ರದೇಶ ಒಣಭೂಮಿಯಾದರೆ, ಮಳೆಕಾಡಿನಲ್ಲಿ ಬೇರೆಯದ್ದೇ ಚಿತ್ರಣ. ಅರಣ್ಯಗಳ ಒಳಗಿನ ಕತ್ತಲೆ ಬೇರೆಯದ್ದೇ ರೀತಿ. ಸಮುದ್ರದಾಳದ್ದು ಮತ್ತೊಂದು ಪ್ರಪಂಚ. ಈ ಎಲ್ಲವನ್ನೂ ಸೆರೆಹಿಡಿಯಲು ತಾಂತ್ರಿಕವಾಗಿ ಸಕಲ ಸಿದ್ಧತೆ ಮಾಡಿಕೊಂಡಿದ್ದೆವು. ವಿಶೇಷ ಲೆನ್ಸ್‌ಗಳನ್ನು ಇಟ್ಟುಕೊಂಡಿದ್ದೆವು. ಆಯಾ ಸ್ಥಳಕ್ಕೆ, ಸಂದರ್ಭಗಳಿಗೆ ತಕ್ಕಂತೆ ಅವಶ್ಯಕ ತಂತ್ರಜ್ಞಾನದ ಬಗ್ಗೆ ತುಂಬಾ ರಿಸರ್ಚ್ ಮಾಡಿ ಶೂಟ್ ಮಾಡುತ್ತಿದ್ದೆವು.



◆ **ಶೂಟಿಂಗ್ ಎಷ್ಟು ದಿನ ನಡೆಯಿತು?**

ಇದು ಸ್ಕ್ರಿಪ್ಟ್ ಇರುವ ಚಿತ್ರವಲ್ಲ. ಅಪ್ಪು ಸರ್ ಮಾತನಾಡಿದ್ದೇ ಸ್ಕ್ರಿಪ್ಟ್. ಅಮೋಘವರ್ಷ, ಪುನೀತ್ ಅವರಿಗೆ ನಾವು ರೆಕಾರ್ಡ್ ಮಾಡುತ್ತಿದ್ದೇವೆ ಎಂಬುದೂ ಗೊತ್ತಾಗುತ್ತಿರಲಿಲ್ಲ. ಹಾಗೆ ಕ್ಯಾಂಡಿಡ್ ಆಗಿ ಕೆಲವು ದೃಶ್ಯಗಳನ್ನು ರೆಕಾರ್ಡ್ ಮಾಡಿದ್ದೆವು. ಒಟ್ಟಾರೆ ನೂರಾ ಆರು ದಿನ ಶೂಟ್ ಮಾಡಿದೆವು. ಅದರಲ್ಲಿ ಶೆಡ್ಯೂಲ್ ಬ್ರೇಕ್ ಇರುತ್ತಿತ್ತು. ಕಾಡಾದ್ದರಿಂದ ಆಯಾ ಋತುವಿಗೆ ತಕ್ಕಂತೆ ಹೋಗಬೇಕಿತ್ತು. ಉದಾಹರಣೆಗೆ, ಚಿತ್ರದಲ್ಲಿ ತೋರಿಸಿರುವ ಕಪ್ಪೆ ಡಾನ್ಸಿಂಗ್ ದೃಶ್ಯ. ಅದನ್ನು ನೋಡಬೇಕೆಂದರೆ ಅವುಗಳ ಮೇಟಿಂಗ್ ಸೀಸನ್‌ನಲ್ಲೇ ಹೋಗಬೇಕು.

◆ **ಕರ್ನಾಟಕವನ್ನು 'ಗಂಧದಗುಡಿ' ಯಂತೆ ತೋರಿಸುವ ಪ್ರಕ್ರಿಯೆ ಹೇಗಿತ್ತು?**

ಕರ್ನಾಟದಲ್ಲಿ ಪ್ರತಿ ಸ್ಥಳಕ್ಕೂ ಅದರದೇ ವಿಶೇಷತೆ ಇದೆ. ನಾಗರಹೊಳೆಯಲ್ಲಿ ಆನೆಗಳು, ಹುಲಿಯಂಥ ದೊಡ್ಡ ದೊಡ್ಡ ಪ್ರಾಣಿಗಳು ಸಿಕ್ಕರೆ, ಮಳೆ ಕಾಡುಗಳಲ್ಲಿ ಚಿಕ್ಕ ಪುಟ್ಟ ಹಾವುಗಳು, ಇತರೆ ಪಕ್ಷಿ ಕೀಟಗಳ ಸೂಕ್ಷ್ಮ ಪ್ರಪಂಚವೇ ಇದೆ. ಸಮುದ್ರದಾಳದಲ್ಲಿ ಇನ್ನೂ ಸುಂದರ ಜೀವವೈವಿಧ್ಯ ತೆರೆದುಕೊಳ್ಳುತ್ತದೆ. ಉತ್ತರ ಕರ್ನಾಟಕದ್ದು ಮತ್ತೂ ಭಿನ್ನ ಪ್ರಪಂಚ. ಇಡೀ ಕರ್ನಾಟಕವನ್ನು ಆವರಿಸಿ ಈ ಸ್ಥಳಗಳನ್ನು ಚೆಂದವಾಗಿ ಕಟ್ಟಿಕೊಡಲು ಎಲ್ಲಾ ಕೋನಗಳಲ್ಲೂ ಪ್ರಯತ್ನ ಮಾಡಿದ್ದೇವೆ. ಈ ಚಿತ್ರ ತಾನಾಗೇ ಆಗುತ್ತಾ ಹೋದದ್ದು. ಹೀಗೇ ಮಾಡಬೇಕು ಎಂದುಕೊಂಡಿರಲಿಲ್ಲ. ಪುನೀತ್ ಅವರು ದಕ್ಕಿಸಿಕೊಂಡ ಅನುಭವಗಳನ್ನು ಜನರಿಗೆ ಅನುಭವವಾಗುವಂತೆ ದಾಟಿಸಬೇಕು ಎಂಬುದೇ ನಮ್ಮ ಮುಖ್ಯ ಉದ್ದೇಶವಾಗಿತ್ತು.

◆ **ಪುನೀತ್ ಅವರೊಂದಿಗೆ ನಿಮ್ಮ ತಂಡದ ಒಡನಾಟ ಹೇಗಿತ್ತು? ಶೂಟಿಂಗ್ ಸಮಯದಲ್ಲಿ ಅಪ್ಪು ಹೇಗಿರುತ್ತಿದ್ದರು?**

ಇಡೀ ಚಿತ್ರತಂಡಕ್ಕೆ ಬೆಂಬಲವಾಗಿ ನಿಂತಿದ್ದವರೇ ಅಪ್ಪು. ನಮ್ಮೊಂದಿಗೆ ಯಾವ ಸಮಯದಲ್ಲಿ ಬೇಕಾದರೂ ಹೊರಡಲು ಸಿದ್ಧವಿರುತ್ತಿದ್ದರು. ಆ ನೂರಾ ಆರು ದಿನಗಳಲ್ಲಿ ಅಪ್ಪು ಅವರೊಂದಿಗಿನ ನೆನಪುಗಳನ್ನು ಮರೆಯಲು ಸಾಧ್ಯವೇ ಇಲ್ಲ. ಸ್ನೇಹಿತರಂತೆ ಎಲ್ಲರೊಂದಿಗೂ ಬೆರೆತು ಸರಳವಾಗಿದ್ದರು. ಪ್ರತಿಯೊಂದು ವಿಷಯದಲ್ಲಿಯೂ ಅವರಿಗೆ ಕುತೂಹಲ. ಕಾಡಿನ ಬಗ್ಗೆ ಏನಾದರೂ ಹೇಳುತ್ತಿದ್ದರೆ ಕಣ್ಣರಳಿಸಿಕೊಂಡು ಕೇಳುತ್ತಿದ್ದರು. ಅವರ ಆ ಸ್ವಭಾವವೇ ಎಲ್ಲರನ್ನೂ ಅವರೆಡೆಗೆ ಸೆಳೆಯುತ್ತಿದ್ದುದು. 'ಗಂಧದಗುಡಿ' ಅನ್ನುವುದೇ ಚಿನ್ನದಂಥ ಅನುಭವ. ಅಪ್ಪು ಅವರೊಂದಿಗೆ ಕುಳಿತು ಚಿತ್ರ ನೋಡುತ್ತೇವೆ ಎಂದುಕೊಂಡಿದ್ದೆವು. ಅದು ಸಾಧ್ಯವಾಗಲಿಲ್ಲ. ಆದರೂ, ಅವರು ನಮ್ಮೊಂದಿಗೆ ಕುಳಿತು ಸಿನಿಮಾ ನೋಡಿದ್ದಾರೆ ಎಂದೇ ಅನ್ನಿಸುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in



# ಏಪ್ರಿಲ್‌ಗೆ 'ಧೂಮಂ'?

ಪುನೀತ್ ರಾಜ್‌ಕುಮಾರ್ ಜೊತೆ 'ದ್ವಿತ್ವ' ಸಿನಿಮಾ ಮಾಡಬೇಕೆಂಬ ಕನಸು ಕಂಡಿದ್ದ ನಿರ್ದೇಶಕ ಪವನ್‌ಕುಮಾರ್ ಅರ್ಥಾತ್ 'ಲೂಸಿಯಾ ಪವನ್‌ಕುಮಾರ್' ಈಗ ಬಹುಭಾಷಾ ಚಲನಚಿತ್ರವೊಂದನ್ನು ನಿರ್ದೇಶಿಸಲು ಸಜ್ಜಾಗಿದ್ದಾರೆ. 'ಧೂಮಂ' ಎನ್ನುವುದು ಚಲನಚಿತ್ರದ ಶೀರ್ಷಿಕೆ. ಕನ್ನಡದಲ್ಲಿ ಅವರು ಕೆಲಸ ಮಾಡುವಾಗ ಸಿನಿಮಾ ಬಿಡುಗಡೆಯ ಗಡುವು ಹಾಕಿಕೊಂಡು ಚಿತ್ರೀಕರಣ ನಡೆಸಿದ್ದು ಕಡಿಮೆಯೇ ಎನ್ನಬೇಕು. ಸಿನಿಮಾ ಮಾಡಿ ಮುಗಿಸುವುದಷ್ಟೇ ತಮ್ಮ ಕೆಲಸ ಎಂದು ಭಾವಿಸಿದ್ದವರು ಅವರು. ಈಗ 'ಧೂಮಂ' ಸಿನಿಮಾ ಬಿಡುಗಡೆ ಮಾಡಲು 2023ರ ಏಪ್ರಿಲ್‌ನ ಗಡುವನ್ನು ನಿಗದಿ ಮಾಡಿರುವ ಸುದ್ದಿ ಇದೆ. ಅದಕ್ಕೇ ಅವರು ಚಕಚಕನೆ ಲೊಕೇಷನ್‌ಗಳನ್ನು ನೋಡಿಕೊಂಡು ಬಂದು, ಅದಾಗಲೇ ಚಿತ್ರೀಕರಣ ನಡೆಸಲು ಸಿದ್ಧರಾಗಿದ್ದಾರೆ.

ಫಹಾದ್ ಫಾಸಿಲ್ ಅಭಿನಯಿಸುತ್ತಿರುವ ಈ ಸಿನಿಮಾ ಮಲಯಾಳಂನಲ್ಲಿ ಅಷ್ಟೇ ಅಲ್ಲದೆ ಕನ್ನಡ, ತೆಲುಗಿನಲ್ಲೂ ಮಾರುಕಟ್ಟೆ ಸೃಷ್ಟಿಸಿಕೊಳ್ಳಲಿದೆ. 'ಕಾಂತಾರ' ಸಿನಿಮಾದ ಯಶಸ್ಸಿನಿಂದ ಭಾರತದ ದೊಡ್ಡ ನಿರ್ಮಾಣ ಸಂಸ್ಥೆ ಎಂದೆನಿಸಿಕೊಂಡಿರುವ 'ಹೊಂಬಾಳೆ ಫಿಲ್ಮ್ಸ್' ಇದಕ್ಕೆ ಬಂಡವಾಳ ಹೂಡುತ್ತಿದೆ. 'ಇದು ಥ್ರಿಲ್ಲರ್ ಸಿನಿಮಾ. ದೊಡ್ಡ ಜವಾಬ್ದಾರಿ ನನ್ನ ಮೇಲಿದೆ' ಎಂದು ಪವನ್ ಪ್ರತಿಕ್ರಿಯಿಸಿದರು.

ಈ ಸಿನಿಮಾದ ಗುಂಗಿನಲ್ಲಿರುವಾಗಲೇ ಪವನ್‌ಕುಮಾರ್ ಬಿಡುವು ಮಾಡಿಕೊಂಡು ಪುನೀತ್ ಅಭಿನಯದ 'ಗಂಧದಗುಡಿ' ಡಾಕ್ಯುಡ್ರಾಮಾ ನೋಡಿಬಂದರು. ಅದಾದ ಮೇಲೆ ಭಾವುಕರಾಗಿ ವಿಡಿಯೊ ಮಾಡಿ, ಪುನೀತ್ ಆ ರೀತಿಯೂ ಅಭಿನಯಿಸಬಹುದು ಎಂದುಕೊಂಡಿರಲಿಲ್ಲ ಎಂದು ಹೇಳಿದರು. ಥಿಯೇಟರ್‌ನಲ್ಲಿ ಕುಳಿತು ಒಂದೇ ಸಮನೆ ಐ–ಫೋನ್‌ನಲ್ಲಿ ತೆರೆಮೇಲೆ ಮೂಡುವ ದೃಶ್ಯಗಳನ್ನು ಸೆರೆಹಿಡಿಯುವ ಮನಸ್ಸುಗಳ ಕುರಿತು ಬೇಸರವೂ ಅವರ ಮಾತಿನಲ್ಲಿ ಇತ್ತು. ■